ದಿನಾಂಕ 10/11/2022 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯ್ತು

**ಪಾಟೀ ಸವಾಲು :- ಶ್ರೀ ಎಂ.ಎನ್.ಜಿ. ಪ್ರತಿವಾದಿ ಪರ ವಕೀಲರಿಂದ**

ವಾದಿ ಈ ದಾವೆಯನ್ನು ಯಾರ ಯಾರ ವಿರುದ್ದ ಹೂಡಿರುತ್ತಾರೆಂದು ನನಗೆ ಗೊತ್ತಿರುವುದಿಲ್ಲ. ವಾದಿ ತಂದೆ ಹೆಸರು ರಂಗಶಾಮಣ್ಣ ಎಂದು , ಅವರನ್ನು ನಾನು ನೋಡಿರುತ್ತೇನೆ. ವಾದಿ ತಂದೆ ಅಣ್ಣ ತಮ್ಮಂದಿರ ಕುಟುಂಬಕ್ಕೆ ಏನು ಆಸ್ತಿಗಳು ಇದ್ದ ಬಗ್ಗೆ ನನಗೆ ಗೊತ್ತಿರುತ್ತದೆ. ಸದರಿ ಆಸ್ತಿಗಳ ಸರ್ವೆ ನಂಬರ್ ಮತ್ತು ಚಕ್ಕುಬಂದಿ ಗೊತ್ತಿರುತ್ತದೆ. ರಂಗಶಾಮಣ್ಣನಿಗೆ ಸರ್ವೆ ನಂ-36/1 ಬಿ1, 1 ಎಕರೆ 15 ಗುಂಟೆ ಬಂದಿರುತ್ತದೆ. ಸದರಿಯವರು ಯಾವಾಗ ವಿಭಾಗ ಮಾಡಿಕೊಂಡಿರುತ್ತಾರೆ ನನಗೆ ಗೊತ್ತಿರುವುದಿಲ್ಲ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ವಾದಿ ತಂದೆ ಕಟುಂಬದಲ್ಲಿ ಯಾವಾಗ ವಿಭಾಗ ಮಾಡಿಕೊಂಡಿರುತ್ತಾರೆಂದು ಬರೆಸಿರುವುದಿಲ್ಲ. ಅವರು ವಿಭಾಗ ಮಾಡಿಕೊಳ್ಳುವ ಕಾಲಕ್ಕೆ ನಾನು ಹುಟ್ಟಿರಲಿಲ್ಲ ಎಂದರೆ ಸರಿ, ಯಾವ ದಾಖಲೆ ಮುಖಾಂತರ ವಿಭಾಗ ಮಾಡಿಕೊಂಡಿರುತ್ತಾರೆಂದು ನನಗೆ ಗೊತ್ತಿರುವುದಿಲ್ಲ.

ವಾದಿ ಮತ್ತು ಅವರ ಅಕ್ಕ ತಂಗಿಯರು ಮದುವೆ ಆಗಿ ಅವರವರ ಗಂಡನ ಮನೆಯಲ್ಲಿ ವಾಸ ಇರುತ್ತಾರೆ ಎಂದರೆ ಸರಿ. ವಾದಿ ಮದುವೆ ಆಗುವ ಕಾಲಕ್ಕೆ ನಾನು ಹುಟ್ಟಿರಲಿಲ್ಲ ಎಂದರೆ ಸರಿ. ವಾದಿ ಮತ್ತು ವಾದಿ ಅಕ್ಕ ತಂಗಿಯರು ಮದುವೆ ಆಗಿ ಅವರ ಗಂಡನ ಮನೆಯಲ್ಲಿ ಅನುಕೂಲವಾಗಿದ್ದಾರೆ ಎಂದರೆ ಸರಿ. ವಾದಿ ಮತ್ತು ಅವರ ಅಕ್ಕ ತಂಗಿಯರ ಮದುವೆ ಕಾಲಕ್ಕೆ ವಡವೆ ಮತ್ತು ಹಣ ಕೊಟ್ಟ ಬಗ್ಗೆ ನನಗೆ ಗೊತ್ತಿರುವುದಿಲ್ಲ. ವಾದಿ ಮದುವೆ ಆದ ನಂತರ ಅವರ ಗಂಡನ ಮನೆಯಲ್ಲಿ ವಾಸ ಇರುತ್ತಾರೆ. 5 ಮತ್ತು 6 ನೇ ಪ್ರತಿವಾದಿಗಳ ಜೊತೆ ವಾಸ ಇರುವುದಿಲ್ಲ ಎಂದರೆ ಸರಿ. ಪ್ರತಿವಾದಿ 5 ಮತ್ತು 6 ಪ್ರತ್ಯೇಕವಾಗಿ ವಾಸ ಇದ್ದು ಪ್ರತ್ಯೇಕವಾಗಿ ವ್ಯವಹಾರ ಮಾಡುರುತ್ತಾರೆ ಎಂದರೆ ಸರಿ. 5 ಮತ್ತು 6 ನೇ ಪ್ರತಿವಾದಿಗಳು ರಂಗಾಪುರ ವಾಸ ಎಂದರೆ ಸರಿ. ನಾನು ಸಹ ರಂಗಾಪುರ ವಾಸಿಯಾದ ಕಾರಣ 5 ಮತ್ತು 6 ನೇ

ಪ್ರತಿವಾದಿಗಳ ವ್ಯವಹಾರದ ಬಗ್ಗೆ ಗೊತ್ತಿರುತ್ತದೆ ಎಂದರೆ ಸರಿಯಲ್ಲ. 6 ನೇ ಪ್ರತಿವಾದಿ ವ್ಯವಸಾಯ ಮತ್ತು ಹೂವಿನ ಮಂಡಿ ವ್ಯಾಪಾರ ಮಾಡುತ್ತಾರೆ ಎಂದರೆ ನನಗೆ ಗೊತ್ತಿರುವುದಿಲ್ಲ. ರಾಜಣ್ಣ ಮತ್ತು ರಾಮಣ್ಣ ವ್ಯವಸಾಯ ಮಾಡುತ್ತಾರೆ. 5 ಮತ್ತು 6 ನೇ ಪ್ರತಿವಾದಿಗಳು ಜಂಟಿಯಾಗಿ ವ್ಯವಸಾಯ ಮಾಡುತ್ತಾರೆ. ಸಾಕ್ಷಿ ಮುಂದುವರೆದು ವಾದಿ ಮತ್ತು ಪ್ರತಿವಾದಿ 1 ರಿಂದ 6 ರವರು ಜಂಟಿಯಾಗಿ ವ್ಯವಸಾಯ ಮಾಡುತ್ತಾರೆ ಎಂದು ಉತ್ತರಿಸಿರುತ್ತಾರೆ. ದಾವಾ ಆಸ್ತಿಗಳಲ್ಲಿ ರಾಗಿ ಬೆಳೆದಿರುತ್ತಾರೆ. ಹಿಂದಿನ ವರ್ಷ ಕಡಲೆಬೀಜ ಹಾಕಿರುತ್ತಾರೆ. 5 ಮತ್ತು 6 ನೇ ಪ್ರತಿವಾದಿಗಳ ದಾವಾ ಆಸ್ತಿಗಳನ್ನು ತಲಾ 1 ಎಕರೆ 15 ಗುಂಟೆ ವಿಭಾಗ ಮಾಡಿಕೊಂಡು ಪ್ರತ್ಯೇಕವಾಗಿ ವ್ಯವಸಾಯ ಮಾಡುತ್ತಾರೆ ಎಂದರೆ ಸರಿಯಲ್ಲ. ದಿ. 26/11/1986 ರಲ್ಲಿ ಒಂದು ವಿಭಾಗ ಪತ್ರ ಮಾಡಿಕೊಂಡು ಸದರಿ ವಿಭಾಗ ಪತ್ರದಂತೆ ಅನುಭವದಲ್ಲಿರುತ್ತಾರೆ ಎಂದರೆ ನನಗೆ ಗೊತ್ತಿರುವುದಿಲ್ಲ. ದಾವಾ ಐಟಂ ನಂ-1 ರಾಜಣ್ಣನ ಭಾಗಕ್ಕೆ ಬಂದು ಖಾತೆ ಇರುತ್ತದೆ ಎಂದರೆ ಸರಿಯಲ್ಲ. ದಾವಾ ಐಟಂ ನಂ-2 ರಾಮಣ್ಣನ ಭಾಗಕ್ಕೆ ಬಂದು ಅವರು ಖಾತೆ ಪಹಣಿ ಮಾಡಿಕೊಂಡು ಅನುಭವದಲ್ಲಿರುತ್ತಾರೆ ಎಂದರೆ ಸರಿಯಲ್ಲ, ನಾನು ದಾವಾ ಆಸ್ತಿಯ ದಾಖಲಾತಿಗಳನ್ನು ನೋಡಿರುವುದಿಲ್ಲ. ವಾದಿಯನ್ನು ನಾನು ಖಾತೆ ಪಹಣಿ ಯಾರ ಹೆಸರಿಗೆ ಬರುತ್ತಿದೆ ಎಂದು ಕೇಳಿ ತಿಳಿದುಕೊಂಡಿರುವುದಿಲ್ಲ. ರಾಜಣ್ಣನಿಗೆ ಮದುವೆ ಆದ ವಿಚಾರ ನನಗೆ ಗೊತ್ತಿರುವುದಿಲ್ಲ. ರಾಮಣ್ಣನಿಗೆ ಮದುವೆ ಆಗಿರುತ್ತದೆ ಎಂದರೆ ಸರಿ. ರಂಗಾಪುರ ಗ್ರಾಮದಲ್ಲಿ 260 ಮನೆಗಳು ಇರುತ್ತವೆ. ನಮ್ಮ ಗ್ರಾಮದ ಊರಿನ ವ್ಯಕ್ತಿಗಳ ಪರಿಚಯ ಇರುತ್ತದೆ ಎಂದರೆ ಸರಿ. ಲೀಲಾವತಿ ಎಂಬ ಮಹಿಳೆ ನಮ್ಮ ಊರಿನಲ್ಲಿ ಇರುವ ಬಗ್ಗೆ ನನಗೆ ಗೊತ್ತಿರುವುದಿಲ್ಲ. ಲೀಲಾವತಿ 6 ನೇ ಪ್ರತಿವಾದಿಯ ಹೆಂಡತಿ ಎಂದರೆ ನನಗೆ ಗೊತ್ತಿರುವುದಿಲ್ಲ. ನಮ್ಮ ಊರಿನಲ್ಲಿ ಮಧುಸೂಧನ, ಶ್ವೇತಾ ಮತ್ತು ಪವಿತ್ರಾ ಎಂಬ ವ್ಯಕ್ತಿ ಬಗ್ಗೆ ನನಗೆ ಗೊತ್ತಿರುವುದಿಲ್ಲ.

6 ನೇ ಪ್ರತಿವಾದಿ ನನ್ನನ್ನು ಸಾಕ್ಷ್ಯ ಹೇಳಲು ಕರೆದುಕೊಂಡು ಬಂದಿರುತ್ತಾರೆ ಎಂದರೆ ಸರಿ. 6 ನೇ ಪ್ರತಿವಾದಿಗೆ ಮದುವೆ ಆಗಿರುವ ವಿಚಾರ ನನಗೆ ಗೊತ್ತಿದ್ದರೂ ಸಹ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ರಾಜಣ್ಣ ಮತ್ತು ಲೀಲಾವತಿಗೆ ಮೂರು ಜನ ಮಕ್ಕಳು ಇರುತ್ತಾರೆ ಎಂದರೆ ನನಗೆ ಗೊತ್ತಿರುವುದಿಲ್ಲ. ಲೀಲಾವತಿ ರವರು ಜೀವನಾಂಶ ಕೋರಿ 6 ನೇ ಪ್ರತಿವಾದಿ ವಿರುದ್ಧ ದಾವೆ ಹೂಡಿರುತ್ತಾರೆ ಎಂದರೆ ನನಗೆ ಗೊತ್ತಿರುವುದಿಲ್ಲ. ಪ್ರತಿವಾದಿ 6 ರ ಮೇಲೆ ಪ್ರತಿವಾದಿ 7 ಮತ್ತು 9 ರವರು ವಿಭಾಗ ಕೋರಿ ದಾವೆ ಹೂಡಿರುತ್ತಾರೆ ಎಂದರೆ ನನಗೆ ಗೊತ್ತಿರುವುದಿಲ್ಲ. 6 ನೇ ಪ್ರತಿವಾದಿ ವಾದಿಯ ಮುಖಾಂತರ ಸುಳ್ಳು ದಾವೆ ಹೂಡಿಸಿರುತ್ತಾರೆ ಎಂದರೆ ಸರಿಯಲ್ಲ. ವಾದಿ ತಂದೆ ಭಾಗ ಮಾಡಿಕೊಳ್ಳುವ ಕಾಲಕ್ಕೆ ಎಷ್ಟು ತಾಕುಗಳು ಬಂದಿದ್ದವು ಎಂದು ನನಗೆ ಹೇಳಲು ಆಗುವುದಿಲ್ಲ. ದಾವಾ ಆಸ್ತಿಗಳು ಎಷ್ಟು ಇವೆ ಎಂದು ನನಗೆ ಗೊತ್ತಿರುವುದಿಲ್ಲ. ವಾದಿ ಮತ್ತು ಅವರ ಅಕ್ಕ ತಂಗಿಯರ ಮದುವೆ ಸುಮಾರು 30 ವರ್ಷಗಳ ಹಿಂದೆ ಆಗಿರುತ್ತದೆ ಎಂದರೆ ಸರಿ. ಆ ಕಾಲಕ್ಕೆ ದಾವಾ ಆಸ್ತಿಗಳ ಬೆಲೆ ಸುಮಾರು 50/- ರೂ ಇರುತ್ತದೆ ಎಂದರೆ ನನಗೆ ಗೊತ್ತಿರುವುದಿಲ್ಲ. ವಾದಿಗೆ ದಾವಾ ಆಸ್ತಿಗಳಲ್ಲಿ ಬರಬೇಕಾದ ಭಾಗಾಂಶಕ್ಕೆ ಸಮನಾಗಿ ಖರ್ಚು ಮಾಡಿ ಮದುವೆ ಮಾಡಿರುತ್ತಾರೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆ ನ್ಯಾ ನ ಉ ಲೇ ಬೆ ಮಾ )

ಓ ಹೇ ಕೇ ಸ ಇ ಎ ಒ

( ರಘುನಾಥ ಗೌಡ ಕೆ.ಟಿ. )
ಪ್ರಧಾನ ಸಿವಿಲ್ ಜಡ್ಜ್, ಮಧುಗಿರಿ